ಆರ್ ಬಿ ಐ / 2004–05 / 348

ಡಿಸಿಎಂ ( ಆರ್‌ಎಂಎಂಟಿ) ಸಂಖ್ಯೆ. 1403 / 11.37.01 / 2004–05

**ಜನವರಿ, 19,2005**

ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
ಎಲ್ಲಾ ಸಾರ್ವಜನಿಕ / ಖಾಸಗಿ ವಲಯ ಬ್ಯಾಂಕುಗಳು
ಮಾನ್ಯರೆ,

**ಬ್ಯಾಂಕು ಶಾಖೆಗಳು ನಾಣ್ಯಗಳನ್ನು ಅಂಗೀಕರಿಸದಿರುವ ಬಗ್ಗೆ**

ನಿಮ್ಮ ಬ್ಯಾಂಕು ಶಾಖೆಗಳು ಸಾರ್ವಜನಿಕರು ಮುಂತಾದವರಿಂದ ಯಾವುದೇ ನಿರ್ಬಂಧ ವಿಧಿಸದೆ ಎಲ್ಲ ವರ್ಗದ ನಾಣ್ಯಗಳನ್ನು ಅಂಗೀಕರಿಸುವಂತೆ ಮಾಡಬೇಕೆಂದು ನಿಮಗೆ ಸಲಹೆ ನೀಡುವ ದಿನಾಂಕ ಅಕ್ಟೋಬರ್ 9,2003 ರ ನಮ್ಮ ಸುತ್ತೋಲೆ ಡಿಸಿಎಂ (ಆರ್‌ಎಂಎಂಟಿ) ಸಂಖ್ಯೆ .404/ 11.37.01 / 2003–04 ಮತ್ತು ದಿನಾಂಕ ಏಪ್ರಿಲ್ 5, 2004 ರ ಸುತ್ತೋಲೆ ಡಿಸಿಎಂ (ಆರ್ ಎಂ ಎಂ ಟಿ) ಸಂಖ್ಯೆ .1181 / 11.37.01 / 2003–04 ಇವುಗಳನ್ನು ದಯವಿಟ್ಟು ನೋಡಿ. ಆದರೆ, ದೇಶದ ವಿವಿಧ ಭಾಗಗಳಿಂದ ಬ್ಯಾಂಕು ಶಾಖೆಗಳು ನಾಣ್ಯಗಳನ್ನು ಅಂಗೀಕರಿಸದ ಬಗ್ಗೆ ದೂರುಗಳು ನಮಗೆ / ಸರ್ಕಾರಕ್ಕೆ ಬರುತ್ತಲೇ ಇವೆ ಮತ್ತು ಪತ್ರಿಕೆಗಳಲ್ಲಿ ಟೀಕೆ ವರದಿಗಳು ಪ್ರಕಟವಾಗುತ್ತಲೇ ಇವೆ. ಅಂಥ ಪ್ರಸಂಗಗಳು (ಬ್ಯಾಂಕುಗಳ ಬಗ್ಗೆ ಇರುವ ಭಾವನೆಗೆ ಆಪಾಯ ತರುವಂಥ) ಉದ್ಭವಿಸದಂತೆ ನೋಡಿಕೊಳ್ಳುವ ಸಲುವಾಗಿ, ನಿಯತವಾಗಿ ಸಿಬ್ಬಂದಿಯನ್ನು ಅಣಿಗೊಳಿಸಬೇಕೆಂದು ನಿಮ್ಮನ್ನು ಕೋರಲಾಗಿದೆ. ಹೀಗೆ ಮಾಡುವುದರಿಂದ ಗ್ರಾಹಕರು ದೂರು ನೀಡುವುದಕ್ಕೆ ಯಾವುದೇ ಕಾರಣ ಇರುವುದಿಲ್ಲ. ಅಲ್ಲದೆ, ನಾಣ್ಯಗಳನ್ನು ಅಂಗೀಕರಿಸುವುದಕ್ಕೆ ಸಂಬಂಧಿಸಿದ ಸೂಚನೆಗಳನ್ನು ಶಾಖೆಗಳು ಪಾಲಿಸುತ್ತಿರುವುದನ್ನು ಪರಿಶೀಲಿಸಲು ಪ್ರಾದೇಶಿಕ ವ್ಯವಸ್ಥಾಪಕರು / ವಲಯ ವ್ಯವಸ್ಥಾಪಕರು ಅನಿರೀಕ್ಷಿತ ಭೇಟಿಗಳನ್ನು ನೀಡುವುದಕ್ಕೆ ಮತ್ತು ಅವರ ವರದಿಗಳನ್ನು ಪುನರ್‌ಪರಿಶೀಲಿಸುವುದಕ್ಕೆ ಸಂಬಂಧಿಸಿದ ಸೂಚನೆಗಳನ್ನು (ಸಿ ಎಫ್ ದಿನಾಂಕ 5, 2004 ರ ಸುತ್ತೋಲೆಯ 4ನೇ ಪ್ಯಾರಾ) ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ದಯವಿಟ್ಟು ಸ್ವೀಕೃತಿ ನೀಡಿ.

**ತಮ್ಮ ವಿಶ್ವಾಸಿ**

**(ಯು. ಎಸ್. ಪಾಲಿವಾಲ್)**
**ಮುಖ್ಯ ಪ್ರಧಾನ ವ್ಯವಸ್ಥಾಪಕರು**